**ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 06-07-1969.**

(ओम शान्ति,  बापदादा. अव्यक्त मुरली 06-07-1969)

***ನಿಮಿತ್ತ ಶಿಕ್ಷಕರಿಗಾಗಿ ಅವ್ಯಕ್ತ ಬಾಪ್ ದಾದಾರ ಮಹಾವಾಕ್ಯಗಳು***

(टीचर्स के प्रति अव्यकत बापदादा के महावाक्य)

ಎಲ್ಲರೂ ಯಾರ ನೆನಪಿನಲ್ಲಿ ಕುಳಿತುಕೊಂಡಿದ್ದೀರಿ? ಒಬ್ಬರ ನೆನಪಿತ್ತೋ ಅಥವಾ ಇಬ್ಬರದೋ? ಯಾರು ಒಬ್ಬರ ನೆನಪಿನಲ್ಲಿದ್ದರೋ ಅವರು ಕೈ ಎತ್ತಿ ಮತ್ತು ಯಾರು ಇಬ್ಬರ ನೆನಪಿನಲ್ಲಿದ್ದಿರೋ ಅವರೂ ಕೈ ಎತ್ತಿ? ಈಗ ಹೇಳಿ ಇಬ್ಬರು ಯಾರು? ವ್ಯಕ್ತವತನವಾಸಿಯೋ ಅಥವಾ ಅವ್ಯಕ್ತ ವತನವಾಸಿಯೋ? ತಾವೆಲ್ಲರೂ ಶಿಕ್ಷಕಿಯರಾಗಿರುವಿರಲ್ಲವೇ, ತಮ್ಮ ಬಳಿ ಯಾರೇ ಜಿಜ್ಞಾಸುಗಳು ಬಂದರೆ ಅವರಿಗೆ ಯಾವ ನೆಲೆ ತೋರಿಸುವಿರಿ? ಎಲ್ಲರಿಗೂ ಯಾವ ಪಾಠ ಕೊಡುವಿರಿ? ಶಿಕ್ಷಕರು ತಮ್ಮ ಶಿಕ್ಷಕನ ಪ್ರಚಾರ (ಪ್ರತ್ಯಕ್ಷತೆ) ಮಾಡುತ್ತಾರೆ. ಜಿಜ್ಞಾಸುವಿಗೆ ಯಾವ ರೀತಿಯ ಪಾಲನೆ ಕೊಡುವಿರಿ ಮತ್ತು ನೆಲೆ ತೋರಿಸುವಿರಿ, ಅದರಿಂದ ಶಿಕ್ಷಕನ ಪ್ರಚಾರ (ಪ್ರತ್ಯಕ್ಷತೆ)ವಾಗುತ್ತದೆ. ಒಂದು ವೇಳೆ ಬರುತ್ತಲೇ ಇಲ್ಲಿಯವರೆಗೆ ಅವರು ನೋಡದೇ ಇರುವ ಅವ್ಯಕ್ತ ವತನದ ವಿಳಾಸವನ್ನು ತಾವು ಕೊಟ್ಟರೆ ತಲುಪುವುದು ಹೇಗೆ? ಮೊದಲು ಯಾವ ವಿಳಾಸವನ್ನು ಕೊಡಲಾಗುತ್ತದೆ?  ನೀವು ಸಂಗ್ರಹಾಲಯದಲ್ಲಿ ಏನು ತಿಳಿಸುತ್ತೀರಿ? ಜಿಜ್ಞಾಸುವಿಗೆ ಯಾವ ಪರಿಚಯ ಕೊಡುತ್ತೀರಿ? ಅವರಿಗೆ ಯಾವ ದಾರಿ, ಯಾವ ವಿಳಾಸವನ್ನು ಕೊಡುತ್ತೀರಿ? ಬೀಜವನ್ನು ಯಾರು ಬಿತ್ತಿದರು? ಬೀಜವಂತು ಬೀಜವೇ ಆಗಿದೆ. ಒಂದು ವೇಳೆ ಕೊಳೆತರೂ ಮಳೆ (ಸಮಯ) ಬಂದಾಗ ಕೆಲವು ರೆಂಬೆಗಳು ಅದರಿಂದ ಬರುತ್ತಿರುತ್ತವೆ. ತಾವು ಬೀಜವನ್ನು ಮರೆತರೆ ದಾರಿಯನ್ನು ಹೇಗೆ ತೋರಿಸುವಿರಿ, ಬೀಜ ಯಾವುದು?

ಶಿಕ್ಷಕಿಯರು ಯುಕ್ತಿಯುಕ್ತವಾಗಿ ಮಾತನಾಡಬೇಕು. ಚಿಕ್ಕ ಮಕ್ಕಳಲ್ಲ ಅಲ್ಲವೇ, ಅವರಿಗೂ ಮೊದಲೇ ಕಲಿಸಲಾಗುತ್ತದೆ. ತಾವಂತೂ ಕಲಿತು ಇಷ್ಟು ಪಾಲನೆಯನ್ನು ಪಡೆದು ಪರೀಕ್ಷೆಯನ್ನು ಕೊಡಲು ಬಂದಿರುವಿರಿ, ಕಲಿಯುವುದರ ಜೊತೆಗೆ ಪರೀಕ್ಷೆಯನ್ನು ಕೊಡುವಿರಿ, ಎರಡೂ ಕಾರ್ಯಗಳು ಜೊತೆಗೆ ಸಾಗುವವು. ತಂದೆ ಅವ್ಯಕ್ತ ವಾಸಿಯಾದರೆ ತಾವುಗಳೂ ಸಹ ಅವ್ಯಕ್ತ ವತನವಾಸಿಯಾಗಬೇಕು. ಅವರು ಯಾವ ಸೃಷ್ಟಿಯಲ್ಲಿದ್ದು ಅವ್ಯಕ್ತರಾದರು? ತಮಗೆ ಎಲ್ಲಿಯಾಗಬೇಕು? ಸೃಷ್ಟಿಯಂತೂ ಗೋಲಾಕಾರದಲ್ಲಿದೆ. ಸೃಷ್ಟಿಯಲ್ಲಿ ಇಡೀ ವೃಕ್ಷ ಸಮಾವೇಶಗೊಂಡಿದೆ. ಆದರೆ ಸೃಷ್ಟಿಯ ನೆಲೆ (ವಿಳಾಸ) ಸಂಗಮವಾಗಿದೆ. ತಮ್ಮೆಲ್ಲರನ್ನು ಇಲ್ಲಿಗೆ ತಂದವರು ಸಂಗಮಯುಗದ ಬಲಿಹಾರಿಗಳಾಗಿದ್ದಾರೆ. ತಾವು ತಮ್ಮ ವಿಳಾಸವನ್ನು ಮರೆತರೆ ಏನಾಗುವುದು. ವಿಳಾಸ ಕೊಡುವವನೂ ಮರೆತುಹೋಗುತ್ತಾನೆ. ವಿಳಾಸವನ್ನು ಸರಿಯಾಗಿ ನೆನಪಿಟ್ಟುಕೊಳ್ಳಿ ಮತ್ತು ಬಾಪ್ ದಾದಾರವರಿಂದ ದೊರೆತ ಶಿಕ್ಷಣವನ್ನು ಧಾರಣೆ ಮಾಡಿಕೊಳ್ಳಿ ಧಾರಣೆಯಿಂದ ತಾಳ್ಮೆ, ಅಂತರ್ಮುಖತೆ ಬರುತ್ತದೆ, ಅದರಿಂದಲೇ ಕಲಿಯುಗದ ರಾವಣ ರಾಜ್ಯವನ್ನು ನಾಶಮಾಡುವಿರಿ. ಆದ್ದರಿಂದ ಪಾಠದ ಮತ್ತು ಪರೀಕ್ಷೆಯ ಸಮಯ ಜೊತೆಯಿದೆ. ಇದು ಮೊದಲನೆಯ ಮಾತಾಗಿದೆ. ಎರಡನೆಯ ಮಾತನ್ನು ಸ್ವಲ್ಪ ಗಮನದಲ್ಲಿಟ್ಟುಕೊಳ್ಳಿ – ಇಷ್ಟು ಸಮಯ ಬಾಪ್ ದಾದಾ ಅವರ ಮಡಿಲಲ್ಲಿ ಪಾಲನೆ ಪಡೆದಿರಿ, ಅದರಲ್ಲಿ ಯಾರಾದರೂ ತಪ್ಪನ್ನು ಮಾಡಿ ನಾಚಿಕೆಯಿಂದ ಬಚ್ಚಿಟ್ಟಿದ್ದರೆ ಅದನ್ನು ಬರೆದುಕೊಡಿ, ಬೇಕಂತಲೇ ಮಾಡಿಲ್ಲ ಆದರೆ ಬೇಜವಾಬ್ದಾರಿತನದಿಂದ ತಪ್ಪಾಗಿದ್ದರೂ, ಬಾಪ್ ದಾದಾರವರ ಮುಂದೆ ಅದನ್ನು ಹೇಳಿದ್ದರೂ ಆ ತಪ್ಪನ್ನು ಬರೆದುಕೊಡಿ. ಪೂರ್ಣ ಜನ್ಮಪತ್ರಿಕೆಯನ್ನು ಎಲ್ಲರೂ ಬರೆದುಕೊಡಿ. ಇದು ಅಂತಿಮ ಸಮಯವಾಗಿದೆಯಲ್ಲವೇ, 84 ಜನ್ಮಗಳ ಲೆಕ್ಕಾಚಾರ ಇಲ್ಲಿಯೇ

ಚುಕ್ತಾ(ಸಮಾಪ್ತಿ) ಆಗುತ್ತದೆ. ಸತ್ಯತೆ ಮತ್ತು ಸ್ವಚ್ಛತೆ ಎಂದು ಹೇಳುತ್ತೀರಿ ಆದರೆ ಸತ್ಯತೆ ಮತ್ತು ಸ್ವಚ್ಛತೆಯಲ್ಲಿ ಅಂತರವೇನಿದೆ ಎಂಬುದರ ಅರ್ಥವನ್ನು ತಿಳಿದಿಲ್ಲ. ಈಗ ಅದರ ಆಳಕ್ಕೆ ಹೋಗಿ ಎಲ್ಲವನ್ನೂ ಬರೆಯಿರಿ.

ಅವ್ಯಕ್ತ ವತನದಿಂದ ಬಾಪ್ ದಾದಾ ಮಕ್ಕಳ ಸೇವೆ ಮಾಡಲು ಮತ್ತು ಸ್ವಚ್ಛವಾಗಿ ತಯಾರುಮಾಡಲು ಬಂದಿದ್ದಾರೆ. ತಂದೆ ಸೇವೆ ಮಾಡುತ್ತಾರೆ. ಆರಂಭದಿಂದ ಅಂತ್ಯದವರೆಗೆ ತಂದೆ ಎಲ್ಲ ಮಕ್ಕಳ ಸೇವಕರಾಗಿದ್ದಾರೆ. ಸೇವೆ ಮಾಡಲು ಸದಾ ಸಿದ್ಧರಾಗಿದ್ದಾರೆ. ನಮ್ಮ ಮಕ್ಕಳು ಮುಕುಟಮಣಿ, ಕಣ್ಮಣಿಯಾಗಿದ್ದಾರೆಂದು ಇವರಿಗಾಗಿ ಸ್ವರ್ಗದ ಸ್ಥಾಪನೆಯಾಗುತ್ತಿದೆ ಎಂದು ತಂದೆಗೆ ಎಷ್ಟು ನಶೆಯಿರುತ್ತದೆ. ಆ ಸ್ವರ್ಗದ ವಾಸಿಗಳನ್ನಾಗಿ ಮಾಡಲು ತಯಾರು ಮಾಡುತ್ತಿದ್ದಾರೆ. ನಾವು ಲಕ್ಷ್ಮಿ-ನಾರಾಯಣರಾಗುತ್ತೇವೆ ಎಂದು ತಿಳಿದು, ಗುರಿಯನ್ನಿಟ್ಟುಕೊಂಡು ಮತ್ತೆ ತಪ್ಪು ಮಾಡುತ್ತಿದ್ದಾರೆ......ಆದ್ದರಿಂದ ಬಾಪ್ ದಾದಾ ಮತ್ತೆ ಸೇವೆ ಮಾಡಲು ಬಂದಿರುವರು. ಅಂತಿಮದ ಮತಿಯಿಂದ ಗತಿ. ಈಗ ಸಮಯವಿಲ್ಲ. ಸಮಯ ಬಹಳ ಸಮೀಪ ಬರುತ್ತಿದೆ. ತಾವೆಲ್ಲ ಹುಲಿಯಂತಿರುವ ಶಕ್ತಿಯರಿಗೆ ಸಹಯೋಗಿಗಳನ್ನು ತಯಾರು ಮಾಡಿಕೊಳ್ಳಬೇಕು. ಆಗಲೇ ಶತ್ರುಗಳೊಂದಿಗೆ ಯುದ್ಧ ಮಾಡಬಲ್ಲಿರಿ. ತಮ್ಮ ಮೇಲೆ ತಮಗೇ ವಿಶ್ವಾಸವಿಲ್ಲದಿದ್ದರೆ, ಬಾಪ್ ದಾದಾರವರ ಪೂರ್ಣ ಪರಿಚಯವೂ ಇಲ್ಲದಿದ್ದರೆ ಶಕ್ತಿಸೇನೆ ಆಗಲು ಸಾಧ್ಯವಿಲ್ಲ. ಆಗ ಶಕ್ತಿಯ ಅಲಂಕಾರಗಳೂ ಇರುವುದಿಲ್ಲ. ಒಂದು ವೇಳೆ ಶಕ್ತಿಯನ್ನು ತಮ್ಮಲ್ಲಿ ಧಾರಣೆ ಮಾಡಿಕೊಂಡರೆ ಬರುವಂತಹವರಿಗೂ ಪೂರ್ಣ ವಿಳಾಸ ಸಿಗುವುದು ಮತ್ತು ಅವರೆಲ್ಲರೂ ಶಕ್ತಿಸೇನೆಯಲ್ಲಿ ಭರ್ತಿಯಾಗುವರು. ಆದ್ದರಿಂದ ತಮ್ಮನ್ನು ಅಸಲಿ (ನಿಜವಾದ) ಆಭರಣವನ್ನಾಗಿ ಮಾಡಿಕೊಳ್ಳಲು ತಮ್ಮಲ್ಲಿರುವ ಕುಂದುಕೊರತೆಗಳನ್ನು ನಿವಾರಿಸಿ ಸ್ವಚ್ಛವಾಗಿ. ಎಷ್ಟು ಪ್ರಕಾರದ ಚಿನ್ನವಿರುತ್ತದೆ. 9 ಕ್ಯಾರೆಟ್, 12 ಕ್ಯಾರೆಟ್. ಅಪ್ಪಟ ಚಿನ್ನವಂತೂ ಪರಿಶುದ್ಧವಾಗಿರುತ್ತದೆ. ಕ್ಯಾರೆಟ್ ಅಕ್ಷರ ತೆಗೆದು ತಮ್ಮನ್ನು ತಿದ್ದಿಕೊಳ್ಳ (correct) ಬೇಕು. ಈಗ ತಿದ್ದಿಕೊಳ್ಳುವ ಸಮಯ ಸಿಕ್ಕಿದೆ. ಈ ಮಾತನ್ನು ಸರಿಯಾಗಿ ನೆನಪಿಟ್ಟುಕೊಳ್ಳಿ. ಭೂಮಿಯು ಬಿರಿದರೂ ಧರ್ಮವನ್ನು ಬಿಡಬಾರದು. ಯಾವ ಧರ್ಮ, ಯಾವ ಭೂಮಿ ಗೊತ್ತೇ? ಒಂದು ಬಾರಿ ವಚನ ಕೊಟ್ಟರೆ, ಬಾಪ್ ದಾದಾ ಅವರಿಗೆ ತಮ್ಮ ಕೈಯನ್ನು ಕೊಟ್ಟ ಮೇಲೆ ಧರ್ಮವನ್ನು ಬಿಡಬಾರದು. ಪತಿವ್ರತಾ ಸ್ತ್ರೀ ತನ್ನ ಧರ್ಮದಲ್ಲಿ ಬಹಳ ನಿಷ್ಠೆಯಿಂದಿರುತ್ತಾಳೆ. ತಾವು ಮಹಾಲಕ್ಷ್ಮಿಯಾಗುವಂತಹ ಸತ್ಯ ಸೀತೆ, ಸತ್ಯ ಲಕ್ಷ್ಮಿಯಾಗಿದ್ದೀರಿ, ಅವರ ಗುರಿಯೇನಿತ್ತು? ತಾವು ತಮ್ಮ ಗುರಿಯಿಂದ ದೂರವಾಗಿದ್ದರೆ ಮತ್ತೆ ತೀವ್ರತೆಯಿಂದ ಗುರಿ ಮುಟ್ಟಿ. ಬಾಪ್ ದಾದಾ ಮಕ್ಕಳ ಸೇವೆ ಮಾಡಲು ಸೇವಕರಾಗಿ ಶಿಕ್ಷಣವನ್ನು ಕೊಡುತ್ತಿದ್ದಾರೆ. ಆದೇಶವನ್ನು ಕೊಡುತ್ತಿಲ್ಲ, ಶಿಕ್ಷಣವನ್ನು ಕೊಡುತ್ತಾರೆ ಏಕೆಂದರೆ ತಂದೆ ಶಿಕ್ಷಕ ಮತ್ತು ಸದ್ಗುರುವೂ ಆಗಿದ್ದಾರೆ. ಒಂದು ವೇಳೆ ಮಕ್ಕಳಿಗೆ ಆದೇಶವನ್ನು ಕೊಟ್ಟರೆ ಮತ್ತು ಅವರು ಕೇಳದಿದ್ದರೆ ಅದು ಸರಿಯಲ್ಲ, ಆದ್ದರಿಂದ ಶಿಕ್ಷಣವನ್ನು ಕೊಡುತ್ತಾರೆ.

ಇಂದು ಅಡಿಪಾಯ (foundation) ಬೀಳುತ್ತಿದೆ. ಚಿಕ್ಕ ಮಕ್ಕಳಿಗೆ ಏನನ್ನು ಮಾಡಬೇಕು ಮತ್ತು ಹೇಗೆ ಮಾಡಬೇಕು ಎಂದು ದಾರಿ ತೋರಿಸಲು ತಿಲಕ ಹಚ್ಚಲಾಗುತ್ತದೆ, ಆದರೆ ನಿಮಗೆಲ್ಲ ದಾರಿ ಸಿಕ್ಕಿದೆ. ತಾವು ಬೇರೆಯವರಿಗೆ ದಾರಿ ತೋರಿಸಲು ನಿಮಿತ್ತರಾಗಿರುವಿರಿ. ಒಂದು ವೇಳೆ ಆ ದಾರಿಯಲ್ಲಿ ಏನಾದರೂ ಹೆಚ್ಚು ಕಡಿಮೆಯಿದ್ದರೆ ಅದನ್ನು ದೂರ ಮಾಡಿಕೊಳ್ಳಿ. ಈಗಲೂ ದೂರವಾಗದಿದ್ದರೆ, ಶಕ್ತಿಯರಿಗೆ ಯಾವ ಬಲ ಸಿಕ್ಕಿದೆಯೋ ಅದು ಮುಂದೆ ನಾಶವಾಗುವುದು ಎಂದು ತಿಳಿದುಕೊಳ್ಳಿ. ಬಾಪ್ ದಾದಾರವರಿಗೆ ಅಲ್ಲಲ್ಲಿ ಹೀಗೆ ಕಂಡು ಬರುತ್ತಿದೆ. ಆದ್ದರಿಂದ ಸಂಘಟನೆಯಲ್ಲಿ ಎಲ್ಲರ ಹೃದಯಗಳನ್ನು ಒಂದಾಗಿ ಮಾಡಲು, ಪೂರ್ಣ ದಾರಿಯನ್ನು ತೋರಿಸಲು ತಮ್ಮನ್ನು ಕರೆಯಲಾಗಿದೆ. ತಮ್ಮೆಲ್ಲರಿಗೂ ಖುಷಿಯಿರಬೇಕು. ಚಿಕ್ಕ ಮಕ್ಕಳನ್ನು ಯಾವುದಾದರೂ ಕಾರ್ಯಕ್ರಮಗಳಿಗೆ ಕರೆದುಕೊಂಡು ಹೋಗುವಾಗ ಅಲ್ಲಿಗೆ ಹೋಗುತ್ತೇವೆ, ಹೊಸ ಬಟ್ಟೆಗಳನ್ನು ತೊಟ್ಟುಕೊಳ್ಳುತ್ತೇವೆ ಎಂದು ಖುಷಿಯಿರುತ್ತದೆ. ಅಂತೆಯೇ ತಮಗೆ ಹೊಸ ಬಟ್ಟೆ, ಶೃಂಗಾರ ಯಾವವು? ಒಂದು ಕಡೆಗೆ ಸೇವಕರೂ ಆಗಬೇಕು, ಸೇವಕರೆಂದರೆ ಪತಿತ ಆತ್ಮರ ಉದ್ಧಾರವನ್ನು ಸದಾ ಮಾಡಿ, ತಾವೆಲ್ಲರೂ ಬರುವಂತಹ ಆತ್ಮಗಳ ಉದ್ಧಾರವನ್ನು ಹೇಗೆ ಮಾಡುವಿರಿ? ಹೇಗೆ ವಿಘ್ನಗಳನ್ನು ದೂರ ಮಾಡುವಿರಿ? ಬಾಣದಲ್ಲಿ ಹರಿತವಿದ್ದಾಗ ಒಂದೇ ಬಾರಿಗೆ ತಾಗುವುದು. ಆ ಆತ್ಮನ ಉದ್ಧಾರವೂ ಆಗುವುದು. ಚಿಕ್ಕ ಮಕ್ಕಳು ಯಾರ ಉದ್ಧಾರ ಮಾಡುವಿರಿ? ಯಾವ ಬೆಟ್ಟವನ್ನು ಎತ್ತಿರುವಿರಿ? ಬೆಟ್ಟವನ್ನೆತ್ತಲು ಯಾರು ನಿಮಿತ್ತರಾದರು? ಗೋಪ -ಗೋಪಿಯರು.

ಪೂರ್ಣ ಕರ್ತವ್ಯ ಮಾಡಿದಾಗ ಗೋಪಿಯರಾಗಲು ಸಾಧ್ಯ ಬಲವಿದ್ದಾಗ ಬೆಟ್ಟವನ್ನೆತ್ತಲು ಸಾಧ್ಯ. ಈ ಎಲ್ಲ ಮಾತುಗಳನ್ನು ಪ್ರಕಾಶಿಸಲು ತಂದೆ ಬರಬೇಕಾಯಿತು. ಇನ್ನು ತಿಲಕವನ್ನಂತೂ ಒಂದೇ ಬಾರಿ ಬಾಪ್ ದಾದಾ ಹಚ್ಚಿದ್ದಾರೆ ಕೆಂಪು ತಿಲಕವೇ ಅಥವಾ ಚಂದನದ ತಿಲಕವೇ? ಕೆಂಪು ತಿಲಕವಾಗಿದೆ ಮುಖದ ಶೋಭೆ, 'ಚಂದನದ ತಿಲಕವಾಗಿದೆ ಆತ್ಮನ ಶೋಭೆ, ಆಭರಣಗಳನ್ನು ನೀವು ಮುಖದ ಶೋಭೆಗಾಗಿ ಧರಿಸಬೇಡಿ, ವಸ್ತ್ರಗಳನ್ನೂ ಜಗತ್ತಿಗೆ ತೋರಿಸಲು ಧರಿಸಬೇಡಿ. ಆದರೆ ಆಂತರ್ಯದಲ್ಲಿ ತಮ್ಮನ್ನು ತಾವು ಲೋಕ-ಪಸಂದ ಮತ್ತು ದಿಲ್-ಪಸಂದ ಆಗುವಂತೆ ಶೃಂಗಾರ ಮಾಡಿಕೊಳ್ಳಿ, ಈ ರೀತಿಯ ಆಭರಣಗಳನ್ನು ಧರಿಸಿ. ಬಹಿರ್ಮುಖಿಗಳು ಲೋಕ ಪಸಂದ ಆಗಿದ್ದಾರೆ, ಅಂತರ್ಮುಖಿಗಳು ದಿಲ್ ಪಸಂದ ಆಗಿದ್ದಾರೆ. ಆದ್ದರಿಂದ ಅಂತರ್ಮುಖಿಗಳಾಗಿ ತಮ್ಮನ್ನು ತಾವು ಶೃಂಗಾರ ಮಾಡಿಕೊಳ್ಳಿ, ಲೋಕ ಪಸಂದಾಗಿ ಭಾಷಣ ಮಾಡಿದಿರಿ, ಖುಷಿ ಮಾಡಿದಿರಿ ಆದರೆ ಭಾಷೆಯ ರಹಸ್ಯ, ಸಾರ ತಮ ಒಂದೊಂದು ಕರ್ಮೇಂದ್ರಿಯಗಳಲ್ಲಿ ಇದ್ದಾಗಲೇ ಶೋಭೆ. ಕರ್ತವ್ಯದಿಂದ ದೈವೀ ಗುಣಗಳ ಪ್ರದರ್ಶನವಾಗಲಿ. ಶೃಂಗಾರಕ್ಕಾಗಿಯೇ ದೈವೀಗುಣಗಳ ತರಗತಿ. ಇದೇ ರೀತಿ ಶೃಂಗರಿಸಲ್ಪಟ್ಟು ಸಂಗಮಯುಗದಿಂದ ಪಾರಾಗುವುದು ಮತ್ತೆ ತಮ್ಮ ಮನೆಗೆ ಹೋಗುವುದು, ಮತ್ತೆ ಮನೆಯಿಂದ ಎಲ್ಲಿಗೆ ಹೋಗುವುದು? ಮಾವನ ಮನೆಗೆ. ಕನ್ಯೆ ವಿವಾಹವಾಗಿ ಮಾವನ ಮನೆಗೆ ಹೋದಾಗ ವಿದ್ಯೆ-ಬುದ್ಧಿಯಿಲ್ಲವಾದರೆ ಅವಳಿಗೆ ನಡೆ ನುಡಿಯ/ವ್ಯವಹಾರದ ಅರಿವಿಲ್ಲ ಎನ್ನುತ್ತಾರೆ, ಈಗ ನೀವು ಮಾವನ ಮನೆಗೆ ಹೋಗಬೇಕಾಗಿದೆ, ತಂದೆ ಹೆಜ್ಜೆ-ಹೆಜ್ಜೆಯನ್ನು ನೋಡುವುದಿಲ್ಲ ಆದರೆ ಒಂದೊಂದು ಕರ್ಮೇಂದ್ರಿಯವನ್ನು ನೋಡುತ್ತಾರೆ. ಹೆಜ್ಜೆ ಅಕ್ಷರ ದೊಡ್ಡದಾಗಿದೆ. ಹೆಜ್ಜೆಗೆ ಪದಮದಷ್ಟು ಸಿಗುತ್ತದೆ. ಅದು ತಮ್ಮ ಕಲ್ಯಾಣಕ್ಕಾಗಿ. ಆದರೆ ಕರ್ಮೇಂದ್ರಿಯಗಳನ್ನು ಶೃಂಗರಿಸಬೇಕು, ಆಭರಣಗಳನ್ನು ಧರಿಸಿ ನಡೆಯಬೇಕು. ಬಾಪ್ ದಾದಾ ಅವರ ಮನೆ ತಮ್ಮ ಮನೆಗೆ ಶೃಂಗರಿಸಿಕೊಳ್ಳಲು ಬಂದಿರುವಿರಿ. ಶೃಂಗರಿಸುವವರಾರು? ನಿಶ್ಚಿತಾರ್ಥವಾದಾಗ ಆಭರಣಗಳನ್ನು ಮಾಡುವವ ಒಬ್ಬ, ತೊಡಿಸುವವನು ಇನ್ನೊಬ್ಬ. ಆದ್ದರಿಂದ ಈಗ ಶೃಂಗರಿಸಿಕೊಂಡು ಹೋಗಬೇಕು. ತಿಳಿಯಿತೇ?

ತಿಳುವಳಿಕೆಯಿರುವ ಶಿಕ್ಷಕಿಯರಾಗಿದ್ದೀರಿ. 15 ದಿನದ ಫಲಿತಾಂಶವನ್ನು ಅಂತ್ಯದ ಫಲಿತಾಂಶವೆಂದು ತಿಳಿದು ಪುರುಷಾರ್ಥ ಮಾಡಿ ಎಲ್ಲರೂ ನುರಿತ ಶಿಕ್ಷಕಿಯರಾಗಬೇಕು. ಇಲ್ಲಿಂದ ವಾಪಸ್ಸು ಹೋಗಿ ತಮ್ಮ ಸೇವಾಕೇಂದ್ರಗಳನ್ನು ಸಂಭಾಳಿಸುವಾಗ ಸರಿಯಾಗಿ ಆಭರಣಗಳನ್ನು ಧರಿಸಿದರೆ ಮಾತ್ರ ಬರುವಂತಹವರಿಗೆ ದೃಷ್ಟಿಯಿಂದ ಸತ್ಯಯುಗದ ಸೃಷ್ಟಿಯನ್ನು ತೋರಿಸಲು ಸಾಧ್ಯ. ಬೇಜವಾಬ್ದಾರಿತನದಿಂದ ಯಾವುದೇ ಆಭರಣ ಬಿದ್ದು ಹೋದರೆ ಹಾನಿಯ ಜೊತೆಗೆ ಶೃಂಗಾರದ ಶೋಭೆಯೂ ಹೋಗುವುದು ಆದ್ದರಿಂದ ಶೋಭೆಯನ್ನಾಗಲಿ, ಆಭರಣಗಳನ್ನಾಗಲಿ ಕಳೆದುಕೊಳ್ಳಬೇಡಿ, ಇದೇನು ದೊಡ್ಡ ಮಾತಲ್ಲ. ಸಣ್ಣದೆಂದು ತಿಳಿದರೆ ಸಹಜವಾಗಿ ತಿಳಿದುಕೊಳ್ಳುವಿರಿ, ಇಲ್ಲ ಬಹಳ ಉನ್ನತವಾದ ಜ್ಞಾನವೆಂದು ಹೇಳಿದರೆ ಯಾರೂ ಬರುವುದಿಲ್ಲ. 7 ದಿನಗಳಲ್ಲಿ ಜೀವನ ಮುಕ್ತಿಯ ಪ್ರಾಪ್ತಿಯೆಂದು ಹೇಳಿದರೆ ಲಾಟರಿ ತೆಗೆದುಕೊಳ್ಳಲು ಎಲ್ಲರೂ ಬರುವರು. ಲಾಟರಿ ಹಾಕುತ್ತಾರೆ, ಅದರಲ್ಲಿ ಕೆಲವರಿಗೆ ಏನಾದರೂ ಸಿಕ್ಕರೆ ಭಾಗ್ಯವೆಂದು ತಿಳಿಯುತ್ತಾರೆ. ಅವಕಾಶವಿದೆ, ಯಾರ ಭಾಗ್ಯದಲ್ಲಿದೆ ಏನಿದೆ ನೋಡೋಣವೆಂದು ಹಾಕುತ್ತಾರೆ. ಕೆಲವರಿಗೆ ದೊಡ್ಡದು ಇನ್ನು ಕೆಲವರಿಗೆ ಚಿಕ್ಕದು ಸಿಗುತ್ತದೆ. ಕೊನೆಗೆ ಪರೀಕ್ಷೆ ಆಗಿ 3 ನಂಬರ ಬರುವವು, ಯಾರು ಎಷ್ಟು ಪುರುಷಾರ್ಥ ಮಾಡುವರೋ ಅಷ್ಟು ನಂಬರ ಸಿಗುವುದು. ಭಾಗ್ಯವನ್ನು ಬೆಳಗಿಸಿಕೊಳ್ಳುವುದು ನಮ್ಮ ಕೈಯಲ್ಲಿದೆ. ಈಗ ಲಾಟರಿಗಾಗಿ ಕಾಯಬೇಡಿ, ತಯಾರಿ ಮಾಡಿಕೊಳ್ಳಿ. ಯೋಗದಿಂದ ಹೇಗೆ ಉದ್ದೇಶ ಪೂರ್ಣವಾಗುವುದು? ನಿಸ್ಸಂಕಲ್ಪರಾಗಿರುವವರನ್ನೇ ನಿಜವಾದ ಯೋಗಿಗಳೆಂದು ಕರೆಯಲಾಗುತ್ತದೆ. ಅವರಲ್ಲಿ ಯಾವ ಗುರಿಯಿದೆಯೋ ಅದನ್ನು ಧಾರಣೆ ಮಾಡಿಕೊಳ್ಳಬೇಕು. ಒಳ್ಳೆಯದು.

ಬಹಳ ಖಜಾನೆ ಸಿಕ್ಕಿತು. ಈಗ ಅದನ್ನು ತಮ್ಮ ಬಳಿ ಜಮಾ ಮಾಡಿಕೊಳ್ಳಿ, ಮತ್ತೆ ಆಕಳಿನಂತೆ ಮೆಲುಕುಹಾಕುತ್ತಿರಿ. ನೀವೆಲ್ಲ ಆಕಳುಗಳಾಗಿದ್ದೀರಿ, ಗೋಪಿಯರೂ ಆಗಿದ್ದೀರಿ, ಬೆಟ್ಟವನ್ನು ಹೇಗೆ ಎತ್ತುವುದು, ಆಕಳುಗಳಾಗಿ ಹೇಗೆ ಮೆಲುಕು ಹಾಕುವುದು ಈ ಕೆಲಸವನ್ನು ಭಟ್ಟಿಯಲ್ಲಿ ಮಾಡಬೇಕು. ಬಹುರೂಪ ಧರಿಸಿ ಬಹುಕರ್ತವ್ಯವನ್ನು ಮಾಡಬೇಕು. ಭಟ್ಟಿಯಲ್ಲಿ ಎಲ್ಲ ಅನುಭವ ಮಾಡಬೇಕು. ಎಷ್ಟು ಪುರುಷಾರ್ಥವನ್ನು ಮಾಡುವಿರೋ ಅಷ್ಟು ಫಲಿತಾಂಶ ಸಿಗುವುದು. ಸಂಪೂರ್ಣ ಸ್ಥಿತಿಯನ್ನು ಪಡೆಯುವ ಉದ್ದೇಶವೇನು? ಸಾಧನವೇನು? ಅದನ್ನು ತಿಳಿದುಕೊಳ್ಳಬೇಕು. ಸಾಧನ ಸಿಕ್ಕರೆ ಉದ್ದೇಶವನ್ನು ಸಾಧಿಸಬಹುದು. ರತ್ನಗಳ ಪರಿಶೀಲನೆ

ಬೇಕಲ್ಲವೇ?ಪೂರ್ಣ ಬೆಲೆಯಿರಬೇಕು. ಆಭರಣದ ಬೆಲೆಯನ್ನು ಅಕ್ಕಸಾಲಿಗ ಪರಿಶೀಲಿಸುತ್ತಾನೆ. ಯಾರಿಗೆ ಪರೀಕ್ಷಿಸುವ ಶಕ್ತಿಯಿಲ್ಲವೋ ಅವರಿಗೆ ಬೆಲೆಯಿರುವುದಿಲ್ಲ. ಆಭರಣದ ಪಾಲಿಶ್ ಆಗಿ, ಕಾಂತಿ ಬಂದಾಗ ಬೆಲೆಬರುವಂತೆ ತಮ್ಮೆಲ್ಲರ ಪರೀಕ್ಷೆ ಆದಾಗ ಗುರುತಿಸುವವರು ಗುರುತಿಸುವರು. ನಕಲಿಯೆಂದು ತಿಳಿದಾಗ ಮತ್ತು ಹಣ ಕೊಟ್ಟು ಆಭರಣ ಕೆಲಸಕ್ಕೆ ಬರದಿದ್ದರೆ ಲಾಭವೇನು? ಆದ್ದರಿಂದ ತಮ್ಮೆಲ್ಲರ ಪೂರ್ಣ ಶೃಂಗಾರವಾಗುವುದು, ಆಗ ಖರೀದಿಸುವವರೂ ಬರುವರು ಮತ್ತು ತಾವು ವತನವಾಸಿ ಆಗುತ್ತಾ ಹೋಗುವಿರಿ.

ಅವ್ಯಕ್ತ ಮುರಳಿ 06-07-1969.

***ನಿಮಿತ್ತ ಶಿಕ್ಷಕರಿಗಾಗಿ ಅವ್ಯಕ್ತ ಬಾಪ್ ದಾದಾರವರ ಮಹಾವಾಕ್ಯಗಳು***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ-ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಪ್ರೇಮ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ಮಾಸ್ಟರ್ ಶಿಕ್ಷಕನಾದ ನಾನು ಶಿಕ್ಷಕರಾದ ಶಿವಬಾಬಾರವರನ್ನು ಪ್ರತ್ಯಕ್ಷ ಮಾಡಿದ್ದೇನೆ.

2. ನಾನು ಬ್ರಹ್ಮಾತಂದೆಯ ಸಮಾನವಾಗಿ ಅವ್ಯಕ್ತ ವತನವಾಸಿಯಾಗಿದ್ದೇನೆ.

3. ನಾನು ಬಾಪ್ ದಾದಾರವರಿಂದ ದೊರೆತ ಶಿಕ್ಷಣವನ್ನು ಧಾರಣೆ ಮಾಡಿ ಧೈರ್ಯವಾಗಿ ಅಂತರ್ಮುಖಿಯಾಗಿದ್ದೇನೆ.

4. ನಾನು ಕಲಿಯುಗೀ ರಾವಣ ರಾಜ್ಯವನ್ನು ಸಮಾಪ್ತಿ ಮಾಡಿರುವ ಧೈರ್ಯ ಸ್ವರೂಪ.

5. ನಾನು ಸತ್ಯತೆ ಮತ್ತು ಸ್ವಚ್ಛತೆಯ ಸ್ವರೂಪ.

6. ನಾನು ಸ್ವರ್ಗ ವಾಸಿಯಾಗಿ ತಯಾರಾದ ಮುಕುಟಮಣಿ ಮತ್ತು ಕಣ್ಮಣಿ.

7. ನಾನು ನನ್ನ ಮೇಲೆ ನಂಬಿಕೆ ಮತ್ತು ಬಾಬಾರವರ ಪರಿಚಯದಿಂದ ಶಕ್ತಿ ಸೇನೆಯಾಗಿ ತಯಾರಾಗಿ ಶಕ್ತಿಯ ಅಲಂಕಾರವನ್ನು ಮಾಡಿಕೊಂಡಿದ್ದೇನೆ.

8. ನಾನು ನನ್ನಲ್ಲಿ ಶಕ್ತಿಯನ್ನು ಧಾರಣೆ ಮಾಡಿ ನನ್ನಲ್ಲಿರುವ ಕುಂದುಕೊರತೆಗಳನ್ನು ತೊಲಗಿಸಿಕೊಂಡು ಸ್ವಚ್ಛವಾದ ವಜ್ರವಾಗಿ ತಯಾರಾಗಿ ಇತರರನ್ನು ಗುರಿಯ ಕಡೆ ತಲುಪಿಸುತ್ತಿದ್ದೇನೆ.

9. ನಾನು ಭೂಮಿ ಬಿರಿದರೂ ಧರ್ಮ ಬಿಡದಿರುವ ಪತಿವ್ರತೆ ನಾರಿ.

10. ನಾನು ಸದಾ ಲಕ್ಷ್ಯದ ಮೇಲೆ ಕುಳಿತುಕೊಳ್ಳುವ ಮಹಾಲಕ್ಷ್ಮಿ ಸ್ವರೂಪ.

11. ನಾನು ಪತಿತ ಆತ್ಮರ ಉದ್ಧಾರ ಮಾಡುವ ಸೇವಕನು.

12. ನಾನು ಕಲಿಯುಗೀ ಪರ್ವತವನ್ನು ಎತ್ತುಲು ಪೂರ್ತಿ ಕರ್ತವ್ಯವನ್ನು ನಿರ್ವಹಿಸುವ ಗೋಪಿಕೆ.

13. ನಾನು ದೈವೀ ಗುಣಗಳಿಂದ ಕರ್ಮೇಂದ್ರಿಯಗಳೆಲ್ಲಕ್ಕೂ ಅಲಂಕಾರವನ್ನು ಮಾಡಿಕೊಂಡಿದ್ದೇನೆ.

14. ನಾನು ಎಷ್ಟು ಪುರುಷಾರ್ಥ ಮಾಡುತ್ತೇನೆ ಅಷ್ಟು ನಂಬರ್ ಲಭಿಸುತ್ತದೆ, ನನ್ನ ಅದೃಷ್ಟ ತಯಾರು ಮಾಡಿಕೊಳ್ಳುವುದು ನನ್ನ ಕೈಯಲ್ಲೇ ಇದೆ.

15. ಶಿವ ತಂದೆಯಿಂದ ಲಭಿಸಿರುವ ಖಜಾನೆಯನ್ನು ನನ್ನ ಹತ್ತಿರ ಜಮಾ ಮಾಡಿಕೊಂಡಿದ್ದೇನೆ.

16. ನಾನು ರತ್ನಗಳೊಂದಿಗೆ ಅಲಂಕರಿಸಿಕೊಂಡು ಮೆರೆಯುವ ಅವ್ಯಕ್ತ ವತನವಾಸಿ.